| | |
|---|---|
| ಪ್ರಾಸಾ | 12 |
| ಚಾಸಾ | 16 |

ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ 4
(ಸಿವಿಲ್)

## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆಃ 4/2024

ಸಾಕ್ಷಿಗೆ ತೆಲುಗು ಮಾತ್ರ ಬರುತ್ತಿದ್ದರಿಂದ ವಕೀಲರಾದ ಶ್ರೀ. ನರಸಿಂಹಮೂರ್ತಿ.ಕೆ ರೋಲ್ ನಂಃ **KAR- 4086/2007** ರವರನ್ನು ಸಾಕ್ಷಿ ವಿಚಾರಣೆಯಲ್ಲಿ ಕನ್ನಡಕ್ಕೆ ತರ್ಜುಮೆ ಮಾಡಲು ನೇಮಿಸಿಕೊಂಡಿರುತ್ತದೆ. ಸದರಿ ವಕೀಲರು ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಸದರಿ ತರ್ಜುಮೆದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿಗೆ ತರ್ಜುಮೆದಾರರ ಮುಖಾಂತರ ತೆಲುಗು ಭಾಷೆಯಲ್ಲಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ನಂದೀಶ |
| ತಂದೆ ಹೆಸರು | ಃ | ಪ್ರಕಾಶ್ |
| ವಯಸ್ಸು | ಃ | 23 ವರ್ಷ |
| ಉದ್ಯೋಗ | ಃ | ತೋಟದ ಕೆಲಸ |
| ವಾಸಸ್ಥಳ | ಃ | ಚಿಕ್ಕಕಿರುಗಂಬಿ |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ನಿಪಿ 1 ಮತ್ತು 2 ರಲ್ಲಿರುವಂತ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳಲ್ಲಿರುವ ಸಾಕ್ಷಿ ಸಹಿಗಳನ್ನು ನಿಪಿ 1(ಬಿ) ಮತ್ತು ನಿಪಿ 2(ಸಿ) ಎಂದು

| | |
|---|---|
| ಪ್ರಾಸಾ | 12 |
| ಚಾಸಾ | 16 |

ಗುರುತಿಸಲಾಯಿತು. ಸಾಕ್ಷಿ ನಿಪಿ 3 ಮತ್ತು 4 ರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ. ನಿಪಿ 1 ಮತ್ತು 2 ಕ್ಕೆ ಚಿಕ್ಕಬಳ್ಳಾಪುರ ಸಿವಿಲ್ ಬಸ್ ನಿಲ್ದಾಣದಲ್ಲಿ ಮೂರು ವರ್ಷಗಳ ಹಿಂದೆ ಮಾಡಿರುತ್ತೇನೆ. ಪೊಲೀಸರು ಯಾವ ಕಾರಣಕ್ಕೆ ಸಹಿ ಪಡೆದರೊ ನನಗೆ ಗೊತ್ತಿಲ್ಲ. ಪೋಲಿಸರು ನಾನು ತೋಟದಿಂದ ಮನೆಗೆ ಬರಬೇಕಾದ ಸಮಯದಲ್ಲಿ ಮನೆಯ ಬಳಿ ನನ್ನ ಸಹಿಗಳನ್ನು ಪಡೆದಿರುತ್ತಾರೆ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಸಾಕ್ಷಿ ಮು. ಮಾ 1 ರಿಂದ 4 ನ್ನು ನೋಡಿ ಗುರುತಿಸಿರುವುದಿಲ್ಲ.

**(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ-**

2. ಸಾಕ್ಷಿಗೆ ನೀವು ದಿಃ 20.03.2021 ರಂದು ಬೆಃ 9.00-10.00 ಗಂಟೆಯಲ್ಲಿ ಪ್ರಾಸಾ-7 ರವರ ಮನೆಯ ಬಳಿ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಅದೇ ಸ್ಥಳದಲ್ಲಿ ಆರೋಪಿ ಪ್ರಾಸಾ-7 ರವರ ಮೇಲೆ ಮಚ್ಚಿನಿಂದ ಹಲ್ಲೆ ಮಾಡಿದರು ಎಂದು ಸ್ಥಳವನ್ನು ತೋರಿಸಿದರು ಎಂದರೆ ಸರಿಯಲ್ಲ. ಅಲ್ಲಿಂದ 15 ಅಡಿ

| | |
|---|---|
| ಪ್ರಾಸಾ | 12 |
| ಚಾಸಾ | 16 |

ದೂರದಲ್ಲಿ ಆರೋಪಿ ನಾಡಬಾಂಬ್ ನ್ನು ಬಿಸಾಡಿದ ಸ್ಥಳ ಇದುವೇ ಎಂದು ತೋರಿಸಿದ ಮೇರೆಗೆ ಪೊಲೀಸರು ನಿಪಿ 2 ಸ್ಥಳ ಪಂಚನಾಮೆಯನ್ನು ಜರುಗಿಸಿ ,ಮು. ಮಾ 1 ರಿಂದ 4 ರಂತೆ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಆರ್.ಜಿ. ವಕೀಲರಿಂದಃ**

3. ಇರುವುದಿಲ್ಲ.

**ಮರುವಿಚಾರಣೆಃ ಇಲ್ಲ.**

**(ದಿನಾಂಕಃ 21.04.2026 ರಂದು ತೆರೆದ ನ್ಯಾಯಾಲಯದಲ್ಲಿ ತರ್ಜುಮೆದಾರರು ಸಾಕ್ಷಿ ಹೇಳಿದ್ದನ್ನು ತರ್ಜುಮೆ ಮಾಡಿದಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**(ಕಾಂತರಾಜು.ಎಸ್.ಪಿ.)**
**1 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**